**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ</u>**

**<u>ಸಿಸಿಃನಂಃ 557/2017</u>**

**ಪಿ.ಡಬ್ಲ್ಯೂಃ 1**

**ಸಾಕ್ಷಿದಾರರ ಹೆಸರು ಃ ಮಧುಶೆಟ್ಟಿ**
**ತಂದೆಯ ಹೆಸರು ಃ ಎಸ್ ಜೆ ಶಿವಣ್ಣ ಶೆಟ್ಟಿ**
**ವಯಸ್ಸು ಃ 47 ವರ್ಷ**
**ಉದ್ಯೋಗ ಃ ಕ್ಯಾಶೀಯರ್**
**ವಾಸಸ್ಥಳ ಃ ಮುತ್ತಿನಕೊಪ್ಪ**

**ದಿನಾಂಕಃ 2.6.2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**<u>ಃಮುಖ್ಯ ವಿಚಾರಣೆಃ ಫಿರ್ಯಾದುದಾರರ ಪರ ಶ್ರೀ. ಕೆ ಎಸ್ ಎಸ್ ವಕೀಲರಿಂದಃಃ</u>**

2013 ನೇ ಇಸವಿ ಡಿಸೆಂಬರ್ ತಿಂಗಳಿನಲ್ಲಿ ಸ್ಟಾರ್ ಆಫ್ ಶಿವಮೊಗ್ಗ ಕನ್ನಡ ವಾರಪತ್ರಿಕೆಯ ಪ್ರಕಟಣೆಯಲ್ಲಿ ನನ್ನ ವಿರುದ್ಧ ಶೃಂಗೇರಿ ಕ್ಷೇತ್ರದ ಶಾಸಕರ ರೈಟ್ ಹ್ಯಾಂಡ್ ನಾನೇ ಎಂಬುದಾಗಿ ಅವಹೇಳನಕಾರಿಯಾಗಿ ನನ್ನ ವಿರುದ್ಧ ಲೇಖನವನ್ನು 1 ನೇ ಆರೋಪಿತರ ಮಾಲೀಕತ್ವ ಮತ್ತು ಸಂಪಾದಕತ್ವದಲ್ಲಿ ನಡೆಯುತ್ತಿರುವ ಸ್ಟಾರ್ ಆಫ್ ಶಿವಮೊಗ್ಗ ಪತ್ರಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ. ಈಗ ಸಾಕ್ಷಿಯು ಸದರಿ ದಿನಾಂಕಃ 24.12.2013 ರ ಸ್ಟಾರ್ ಆಫ್ ಶಿವಮೊಗ್ಗ ಕನ್ನಡ ವಾರಪತ್ರಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಮತ್ತು ಸದರಿ ಪತ್ರಿಕೆಯಲ್ಲಿ ಪ್ರಕಟಣೆಯಾಗಿರುವ ಪುಟ ಸಂಃ 8 ರಲ್ಲಿರುವ ಪ್ರಕಟಣೆಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರಕಟಣೆಯ ಭಾಗಾಂಶವನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಪತ್ರಿಕೆಯ ವರದಿಯಲ್ಲಿ ನನ್ನ ಮಾನಹಾನಿಯಾಗಿದ್ದು, ಸಮಾಜದಲ್ಲಿ ನನ್ನ ಗೌರವಕ್ಕೆ ಚ್ಯುತಿ ಬಂದಿರುತ್ತದೆ. ಸದರಿ ಅವಹೇಳನಕಾರಿ ಲೇಖನದ ಪ್ರಕಟಣೆಯಿಂದ ನನಗೆ ಮತ್ತು ನಮ್ಮ ಕುಟುಂಬದ ಗೌರವಕ್ಕೆ ಧಕ್ಕೆಯಾಗಿರುತ್ತದೆ. ಸದರಿ ಮಾನಹಾನಿಕರ ಪ್ರಕಟಣೆಯ ಕುರಿತಾಗಿ ಸಮಜಾಯಿಷಿ ನೀಡುವಂತೆ ಕೋರಿ ನಾನು ನನ್ನ ವಕೀಲರ ಮುಖಾಂತರ ವಕೀಲರ ನೋಟೀಸನ್ನು ದಿನಾಂಕಃ 16.5.2014 ರಂದು 1 ರಿಂದ 3 ನೇ ಆರೋಪಿತರಿಗೆ ನೀಡಿರುತ್ತೇನೆ. ಸಾಕ್ಷಿಯು ಸದರಿ ನೋಟೀಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸದರಿ

ನೋಟೀಸು 1 ನೇ ಆರೋಪಿತರಿಗೆ ಜಾರಿಯಾಗಿರುತ್ತದೆ. 3 ಅಂಚೆ ರಶೀದಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-3 ಎಂದು ಗುರುತಿಸಲಾಯಿತು. 1 ನೇ ಆರೋಪಿತರಿಗೆ ಸದರಿ ನೋಟೀಸು ಜಾರಿಯಾಗಿದ್ದು ಈ ಬಗ್ಗೆ ಅಂಚೆ ಇಲಾಖೆಯವರು ನೀಡಿರುವ ಅಂಚೆ ಸ್ವೀಕೃತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. 3 ನೇ ಆರೋಪಿತರಿಗೆ ಕಳುಹಿಸಿದ್ದ ನೋಟೀಸು ಮುಚ್ಚಿದ ಲಕೋಟೆಯಲ್ಲಿ ಹಿಂದಿರುಗಿದ್ದು, ಅದನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸದರಿ ಮುಚ್ಚಿದ ಲಕೋಟೆಯನ್ನು ನ್ಯಾಯಾಲಯದಲ್ಲಿ ತೆರೆದಿದ್ದು, ಮುಚ್ಚಿದ ಲಕೋಟೆಯನ್ನು ನಿಪಿ-5 ಎಂದು, ಲಕೋಟೆಯಲ್ಲಿರುವ ನೋಟೀಸಿನ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

2 ನೇ ಆರೋಪಿತರಿಗೆ ಕಳುಹಿಸಿದ್ದ ನೋಟೀಸು ಮುಚ್ಚಿದ ಲಕೋಟೆಯಲ್ಲಿ ಹಿಂದಿರುಗಿದ್ದು, ಅದನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸದರಿ ಮುಚ್ಚಿದ ಲಕೋಟೆಯನ್ನು ನ್ಯಾಯಾಲಯದಲ್ಲಿ ತೆರೆದಿದ್ದು, ಮುಚ್ಚಿದ ಲಕೋಟೆಯನ್ನು ನಿಪಿ-6 ಎಂದು, ಲಕೋಟೆಯಲ್ಲಿರುವ ನೋಟೀಸಿನ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**Sd/-**
**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**